ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :-

ಅ) ಈ ಕಾಮಗಾರಿಯನ್ನು ಮಾರ್ಚ್ 91 ರಲ್ಲಿ ಪ್ರಾರಂಭ ಮಾಡಲಾಯಿತು.

ಫೌಂಡೇಷನ್ ಕಾಂಕ್ರೀಟ್ ಮುಗಿದಿದ್ದು, ಪಿಯರ್ ಮಟ್ಟದವರೆಗೆ ಕಾಂಕ್ರೀಟ್ ಕೆಲಸ ಮಾಡಲಾಗಿದೆ.

ಆ) ಈ ಯೋಜನೆಗೆ ಮಂಜೂರಾದ ಅಂದಾಜು ಮೊತ್ತ ರೂ. 53.27 ಲಕ್ಷಗಳಾಗಿದ್ದು. ಪರಿಷ್ಕೃತ ಅಂದಾಜು ಮೊತ್ತ ರೂ. 110.05 ಲಕ್ಷ ಆಗುತ್ತದೆ. ಇದುವರೆಗೆ ರೂ. 88.43 ಲಕ್ಷ ಖರ್ಚು ಮಾಡಲಾಗಿದೆ.

ಇ) ಈ ಕಾಮಗಾರಿಯನ್ನು ಮಾರ್ಚ್ 97 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ವಿಷಯ :- ಬೇಸಿಗೆಯಲ್ಲಿ ಬೇರೆ ರಾಜ್ಯಗಳಿಂದ ಖರೀದಿ ಮಾಡಿದ ವಿದ್ಯುತ್ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 928 (178)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಬೇಸಿಗೆಯಲ್ಲಿ ಉಂಟಾದ ವಿದ್ಯುತ್ ತೀವ್ರ ಕೊರತೆಯನ್ನು ನೀಗಿಸಲು ಯಾವ ಯಾವ ರಾಜ್ಯಗಳಿಂದ ಎಷ್ಟು ಪ್ರಮಾಣದ ವಿದ್ಯುತ್ ಖರೀದಿ ಮಾಡಲಾಗಿದೆ.

ಆ) ಇದಕ್ಕಾಗಿ ಕೊಡ ಮಾಡಿದ ಹಣವೆಷ್ಟು?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ್ (ಇಂಧನ ರಾಜ್ಯ ಸಚಿವರು) :-

ಅ) ಸೆಪ್ಟೆಂಬರ್ 1995 ರಿಂದ ಜೂನ್ 1996 ರ ಅವಧಿಯಲ್ಲಿ ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಿಂದ ವಿದ್ಯುತ್‌ನ್ನು ಖರೀದಿಸಿದೆ. ವಿವರಗಳು ಕೆಳಕಂಡಂತಿವೆ.

ರಾಜ್ಯ	ಅವಧಿ	ಖರೀದಿಸಿದ ವಿದ್ಯುತ್‌ನ ಪ್ರಮಾಣ
ಮಹಾರಾಷ್ಟ್ರ	ಸೆಪ್ಟೆಂಬರ್ 95 ರಿಂದ ಜೂನ್ 96 ರವರೆಗೆ	460.268 ದ.ಲಕ್ಷ ಯೂನಿಟ್ಟುಗಳು.
ತಮಿಳುನಾಡು	1-11-95 ರಿಂದ 17-11-95 ಮತ್ತು 8-12-95 ರಿಂದ 19-12-95	8.223 ದ. ಲಕ್ಷ ಯೂನಿಟ್‌ಗಳು

ಆ) ಕೊಡಮಾಡಿದ ಹಣದ ವಿವರಗಳು ಕೆಳಕಂಡಂತಿವೆ.

1)	ಮಹಾರಾಷ್ಟ್ರ (ಎಂಎಸ್ಇಬಿ)	9205.37 ಲಕ್ಷ ರೂ.
2)	ತಮಿಳುನಾಡು (ಟಿಎನ್ಇಬಿ)	148.01 ಲಕ್ಷ ರೂ.

ವಿಷಯ :- ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದ್ದೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 929 (1569)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 30-6-96 ರವರೆಗೆ ವಿದ್ಯುದ್ದೀಕರಣಕ್ಕೆ ಹೊಂದಿದ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) 30-6-96 ರವರೆಗೆ ತಾಲ್ಲೂಕುವಾರು ಮಂಜೂರಾಗಿರುವ ವಿದ್ಯುದ್ದೀಕರಣಕ್ಕೆ ಕಾದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಇ) 30-6-96 ವರೆಗೆ ಅರ್ಜಿ ಕೊಟ್ಟು ಇನ್ನೂವರೆಗೆ ಮಂಜೂರಾಗಿರುವ ಸಂಖ್ಯೆ ಎಷ್ಟು? (ತಾಲ್ಲೂಕುವಾರು)

ಈ) ಈಗ ಕಾದಿರುವ ಅರ್ಜಿಗಳಿಗೆ ಇನ್ನು ಎಷ್ಟು ದಿನಗಳಲ್ಲಿ ವಿದ್ಯುತ್ ಕೊಡಲಾಗುವುದು?

ಉ) 1996-97 ನೇ ಸಾಲಿನಲ್ಲಿ ತಾಲ್ಲೂಕುವಾರು ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದ್ದೀಕರಣ ಗುರಿ ಎಷ್ಟು?

ಶ್ರೀ ಶರಣಪ್ಪ ಬಸಪ್ಪ ದರ್ಶಾನಪುರ್ (ಇಂಧನ ರಾಜ್ಯ ಸಚಿವರು) :-

ಅ) ರಾಜ್ಯದಲ್ಲಿ 30-6-96 ವರೆಗೆ ವಿದ್ಯುದ್ದೀಕರಣ ಹೊಂದಿರುವ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ (ಹುಕ್ಕೇರಿ ತಾಲ್ಲೂಕು ಸೇರಿದಂತೆ) 10,20,153. (ತಾಲ್ಲೂಕುವಾರು ವಿವರವನ್ನು ಅನುಬಂಧದ ಕಾಲಂ 3 ರಲ್ಲಿ ನೀಡಿದೆ.

ಆ) 30-6-96 ವರೆಗೆ ಮಂಜೂರಾಗಿ ವಿದ್ಯುದ್ದೀಕರಣಕ್ಕಾಗಿ ಕಾದಿರುವ ಅರ್ಜಿಗಳ ಸಂಖ್ಯೆ : 61,449. ಅನುಬಂಧದ ಕಾಲಂ 4 ರಲ್ಲಿ ನೀಡಿದೆ.

ಇ) 30-6-96 ವರೆಗೆ ಅರ್ಜಿ ಕೊಟ್ಟು ಮಂಜೂರಾಗದವರ ಸಂಖ್ಯೆ : 34,570 (ತಾಲ್ಲೂಕುವಾರು ವಿವರವನ್ನು ಅನುಬಂಧದ ಕಾಲಂ 5 ರಲ್ಲಿ ನೀಡಿದೆ.